# ಕರ್ನಾಟಕ ವಿಧಾನ ಸಭೆ

# KARNATAKA LEGISLATIVE ASSEMBLY

ಸೋಮವಾರ, ೭ನೇ ಆಗಸ್ಟ್ ೧೯೯೫, ಸಾಯನ ಸೌರ ಶ್ರಾವಣ ಶಕ ೧೯೧೭

ಸದನವು ವಿಧಾನ ಸೌಧದಲ್ಲಿರುವ ವಿಧಾನಸಭೆಯ ಸಂಭಾಂಗಣದಲ್ಲಿ

ಬೆಳಿಗ್ಗೆ ೧೧.೦೦ ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು : (ಶ್ರೀ ರಮೇಶ್ ಕುಮಾರ್) ಅವರು ಪೀಠವನ್ನು ಅಲಂಕರಿಸಿದ್ದರು.

## ಸಂತಾಪ ಸೂಚನೆಗಳು

ಅಧ್ಯಕ್ಷರು : ವಿಧಾನ ಸಭೆಯ ಮಾಜಿ ಸದಸ್ಯರಾದ ಶ್ರೀ ಎ.ವಿ. ಅಪ್ಪಾಸ್ವಾಮಿರೆಡ್ಡಿ, ಜೆ. ನಾರಾಯಣಪ್ಪ, ಸಿ.ಕೆ. ಕಾಳಪ್ಪ ಹಾಗೂ ಶ್ರೀಪಾದ ಆರ್.ಹೆಗ್ಗಡೆ, ಪ್ರಜಾಪ್ರತಿನಿಧಿ ಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಎಂ.ಎಲ್. ನಂಜೇರಾಜೇ ಅರಸ್, ಕೆ. ಹಿಂಜಾರಪ್ಪ ಹಾಗೂ ಎಂ. ಈರೇಗೌಡ. ಲೋಕಸಭಾ ಸದಸ್ಯರಾಗಿದ್ದ ಪ್ರೋ.ಎನ್.ಜಿ. ರಂಗಾ ಹಾಗೂ ಪ್ರಖ್ಯಾತ ಕನ್ನಡ ಚಲನಚಿತ್ರ ನಟ ಶ್ರೀ. ಟಿ.ಎನ್. ಬಾಲಕೃಷ್ಣ ಅವರುಗಳು ನಿಧನರಾಗಿರುವ ಬಗ್ಗೆ ಸದನಕ್ಕೆ ವಿಷಾದದಿಂದ ತಿಳಿಸುತ್ತಿದ್ದೇನೆ.

1. ವಿಧಾನ ಸಭೆಯ ಮಾಜಿ ಸದಸ್ಯಾರಾದ ಶ್ರೀ ಎ.ವಿ. ಅಪ್ಪಾಸ್ವಾಮಿರೆಡ್ಡಿ ಅವರು ದಿನಾಂಕ 23-5-1995ರಂದು ಬಾಗೇಪಲ್ಲಿಯಲ್ಲಿ ನಿಧನರಾದರು ೪ನೇ ವಿಧಾನ ಸಭೆಗೆ ಸಿ.ಪಿ.ಐ(ಎಂ) ಪಕ್ಷದಿಂದ ಬಾಗೇಪಲ್ಲಿ ಕ್ಷೇತ್ರದಿಂದ ಆಯ್ಕೆಯಾಗಿದ್ದ ಶ್ರೀಯುತರು ರೈತರ ಚಳುವಳಿಯ ಮುಂಚೂಣಿಯಲ್ಲಿದ್ದು, ರೈತಾಪಿ ಜನರಿಗಾಗಿ ಅನೇಕ ಬಾರಿ ಸೆರೆಮನೆ ವಾಸವನ್ನು ಅನುಭವಿಸಿದ್ದರು.

2. ವಿಧಾನ ಸಭೆಯ ಮಾಜಿ ಸದಸ್ಯರಾದ ಶ್ರೀ ಜೆ. ನಾರಾಯಣಪ್ಪ ಅವರು ದಿನಾಂಕ 19-6-1995ರಂದು ಜೇಡರಹಳ್ಳಿಯಲ್ಲಿ ನಿಧನರಾದರು, ಮುಳಬಾಗಿಲು ವಿಧಾನ ಸಭಾ ಕ್ಷೇತ್ರದಿಂದ ಎರಡು ಮತ್ತು ಮೂರನೇ ವಿಧಾನ ಸಭೆಗೆ ಆಯ್ಕೆಯಾಗಿದ್ದ ಶ್ರೀಯುತರು ಕೋಲಾರ ಜಿಲ್ಲಾಭಿವೃದ್ಧಿ ಸಮಿತಿ ಸದಸ್ಯರಾಗಿ ಕಾರ್ಯನಿರ್ವಹಿಸಿರುತ್ತಾರೆ.

3. ವಿಧಾನ ಸಭೆಯ ಮಾಜಿ ಸದಸ್ಯರಾದ ಶ್ರೀ ಸಿ.ಕೆ. ಕಾಳಪ್ಪ ಅವರು ಚೌಡ್ಲು ಗ್ರಾಮದಲ್ಲಿ ದಿನಾಂಕ 17-7-1995 ರಂದು ನಿಧನರಾದರು. ಮೊದಲನೇ ವಿಧಾನ ಸಭೆಗೆ ಕೊಡಗು ಕ್ಷೇತ್ರದಿಂದ ಆಯ್ಕೆಯಾಗಿದ್ದ ಶ್ರೀಯುತರು 1990 ರಿಂದ 1994ರವರೆಗೆ ವಿಧಾನ ಪರಿಷತ್ತಿನ ಸದಸ್ಯರಾಗಿ ಪ್ರಜಾ ಸೇವೆ ಸಲ್ಲಿಸಿರುತ್ತಾರೆ.

4. ವಿಧಾನ ಸಭೆಯ ಮಾಜಿ ಸದಸ್ಯರಾದ ಶ್ರೀ ಶ್ರೀಪಾದ ಆರ್ ಹೆಗ್ಗಡೆ ಅವರು ದಿನಾಂಕ 24-7-1995ರಂದು ಕಡವೆಯಲ್ಲಿ ನಿಧನರಾದರು ೪ನೇ ವಿಧಾನ ಸಭೆಗೆ ಅಂಕೋಲ ಕ್ಷೇತ್ರದಿಂದ ಆಯ್ಕೆಯಾಗಿದ್ದ ಶ್ರೀಯುತರು ಉತ್ತರ ಕನ್ನಡ ಜಿಲ್ಲೆಯ ಸಹಕಾರಿ ರಂಗದ ಅಗ್ರಮಾನ್ಯ ದುರೀಣರುಸ ಶಿಕ್ಷಣರಂಗದ ಚಿಂತನಶೀಲರು ಆಗಿದ್ದರು.

5. ಪ್ರಜಾಪ್ರತಿನಿಧಿ ಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಎಂ.ಎಲ್ನಂಜೇರಾಜ್ ಅರಸ್ ಅವರು ದಿನಾಂಕ 29-5-1995ರಂದಿ ಬೆಂಗಳೂರಿನಲ್ಲಿ ನಿಧನರಾದರು.

ಸ್ವಾತಂತ್ರ್ಯ ಹೋರಾಟಗಾರರಾಗಿದ್ದ ಶ್ರೀಯುತರು ಕರ್ನಾಟಕ ಲೋಕಸೇವಾ ಆಯೋಗದ ಸದಸ್ಯರಾಗಿಯೂ ಸೇವೆ ಸಲ್ಲಿಸಿರುತ್ತಾರೆ.

6. ಪ್ರಜಾಪ್ರತಿನಿಧಿ ಸಭೆಯ ಮಾಜಿ ಸದಸ್ಯರಾದ ಶ್ರೀ ಕೆ. ಹೆಂಜಾರಪ್ಪ ಅವರು ದಿನಾಂಕ 9-7-1995ರಂದು ಬೆಂಗಳೂರಿನಲ್ಲಿ ನಿಧನರಾದರು. ನಿವೃತ್ತ ಐ.ಎ.ಎಸ್. ಅಧಿಕಾರಿಯಾಗಿದ್ದ ಶ್ರೀಯುತರು ಬೆಂಗಳೂರು ನಗರಾಭಿವೃದ್ಧಿ ಮಂಡಳಿಯ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿರುತ್ತಾರೆ.

7. ಪ್ರಜಾಪ್ರತಿನಿಧಿ ಸಭೆಯ ಮಾಜಿ ಸದಸ್ಯರಾದ ಶ್ರೀ ಎಂ. ಈರೇಗೌಡ ಅವರು ದಿನಾಂಕ 4-6-1995ರಂದು ಪಾಂಡವಪುರದಲ್ಲಿ ನಿಧನರಾದರು, ಸ್ವಾತಂತ್ರ್ಯ ಹೋರಾಟಗಾರರಾಗಿದ್ದ ಶ್ರೀಯುತರು ಶಿಕ್ಷಣ ಸಂಸ್ಥೆಗಳನ್ನು ಹಾಗೂ ಪಶುವೈದ್ಯ ಆಸ್ಪತ್ರೆಗಳನ್ನು ಸ್ಥಾಪಿಸಿ ಜನಹಿತ ಕಾರ್ಯಗಳಲ್ಲಿ ಹೆಚ್ಚಿನ ಶ್ರಮವಹಿಸಿದ ವ್ಯಕ್ತಿಯಾಗಿದ್ದರು.

8. ಹಿರಿಯ ಕಾಂಗ್ರೆಸ್ ನಾಯಕರೂ ಮಾಜಿ ಸಂಸತ್ ಸದಸ್ಯರು ಆದ ಪ್ರೊ.ಎನ್.ಜಿ. ರಂಗಾ ಅವರು ದಿನಾಂಕ 8-6-1995 ರಂದು ಗುಂಟೂರು ಜಿಲ್ಲೆಯ ಪೊನ್ನೂರಿನಲ್ಲಿ ನಿಧನರಾದರು, ಅವರು ಹೆಚ್ಚು ಅವಧಿಯವರೆಗೆ ಸಂಸತ್ ಸದಸ್ಯರಾಗಿ ಕಾರ್ಯನಿರ್ವಹಿಸಿದ್ದರು. ಅವರ ದೀರ್ಘಕಾಲದ ಸದಸ್ಯತ್ವವನ್ನು ಗುರುತಿಸಿ ಗಿನ್ನೀಸ್ ಪುಸ್ತಕದಲ್ಲಿ ಅವರ ಹೆಸರು ದಾಖಲಾತಿಯಾಗಿದೆ. ಶ್ರೀಯುತರು ಮಹಾತ್ಮಾ ಗಾಂಧಿಯವರ ನಿಕಟ ಅನುಯಾಯಿಯಾಗಿದ್ದು, ಸ್ವಾತಂತ್ರ್ಯ ಹೋರಾಟಗಾರರಾಗಿ, ರೈತರ ನ್ಯಾಯಬದ್ಧ ಹಕ್ಕುಗಳಿಗಾಗಿ ಹೋರಾಡಿದ್ದ ಶ್ರೀಯುತರು ಹಲವಾರು ಗ್ರಂಥಗಳನ್ನು ಬರೆದು ಸಮಾಜಕ್ಕೆ ಕೊಡುಗೆ ನೀಡಿರುವ ಅಗ್ರಗಣ್ಯರಾಗಿದ್ದಾರೆ.

9. ಹಲವಾರು ದಶಕಗಳ ಕಾಲ ಕನ್ನಡದ ಪ್ರೇಕ್ಷಕರನ್ನು ನಗಿಸಿ ರಂಜಿಸಿದ ಕನ್ನಡ ಚಲನಚಿತ್ರ ನಟ ಶ್ರೀ ಟಿ.ಎನ್. ಬಾಲಕೃಷ್ಣ ಅವರು ದಿನಾಂಕ 19-7-1995ರಂದು ಬೆಂಗಳೂರಿನಲ್ಲಿ ನಿಧನರಾದರು, ಶ್ರೀಯುತರು 512 ಚಲನಚಿತ್ರಗಳಲ್ಲಿ ನಟಿಸಿ ಕನ್ನಡ ಕಲಾರಂಗವನ್ನು ಶ್ರೀಮಂತಗೊಳಿಸಿ, ಕನ್ನಡಿಗರ "ಅಭಿಮಾನ" ಸ್ಟುಡಿಯೋದಲ್ಲಿ ತಮ್ಮ ಆದಾಯವನ್ನೆಲ್ಲಾ ವಿನಿಯೋಗಿಸಿದ್ದರು, ಬಾಲಣ್ಣನವರು ಚಿತ್ರಗಳಲ್ಲಿ ಮಾಡುತ್ತಿದ್ದ ಹಾಸ್ಯದ ಮೋಡಿ ಕನ್ನಡಿಗರ ಹೃನ್ಮನಗಳಲ್ಲಿ ಸದಾ ಹಸಿರಾಗಿದೆ.

ನಿಧನ ಹೊಂದಿದವರ ಸ್ಮರಣಾರ್ಥ ಮಾನ್ಯ ಸದಸ್ಯರುಗಳು ಒಂದು ನಿಮಿಷ ಎದ್ದು ನಿಂತು ಮೌನವನ್ನು ಆಚರಿಸಬೇಕೆಂದು ಕೇಳಿಕೊಳ್ಳುತ್ತೇನೆ

(ಸದನವು ಮೃತರ ಗೌರವಾರ್ಥ ಒಂದು ನಿಮಿಷ ಮೌನವನ್ನು ಆಚರಿಸಿತು)

ಈ ಸದನ ಅಂಗೀಕರಿಸಿದ ಸಂತಾಪ ಸೂಚನಾ ನಿರ್ಣಯವನ್ನು ಮೃತರ ಕುಟುಂಬವರ್ಗದವರಿಗೆ ಕಳಿಹಿಸಿಕೊಡಲಾಗುವುದು.

ಶ್ರೀ ವಾಟಾಳ್ ನಾಗರಾಜ್ : ಸನ್ಮಾನ್ಯ ಸಭಾಧ್ಯಕ್ಷರೇ, ಮಹಾರಾಷ್ಟ್ರ ಸರ್ಕಾರದ ಬಗ್ಗೆ ನಾನು ಒಂದು ವಿಚಾರವನ್ನು ತಮ್ಮ ಗಮನಕ್ಕೆ ತರಬೇಕೆಂದು ಹೇಳಿ...

ಅಧ್ಯಕ್ಷರು: ಪ್ರಶ್ನೋತ್ತರ ವೇಳೆ ಆದ ಮೇಲೆ ತೆಗೆದುಕೊಳ್ಳೋಣ.

ಶ್ರೀ ವಾಟಾಳ್ ನಾಗರಾಜ್ : ಪ್ರಶ್ನೋತ್ತರಕ್ಕೆ ಮುಂಚಿತವಾಗಿ ಅದನ್ನು ತೆಗೆದುಕೊಳ್ಳುವುದು ಒಳ್ಳೆಯದೆಂದು ನನಗನ್ನಿಸುತ್ತದೆ. ಏಕೆಂದರೆ ಮಹಾರಾಷ್ಟ್ರದಲ್ಲಿ ಒಂದು ನಿರ್ಣಯವಾಗಿದೆ. ಬೆಳಗಾವಿಯನ್ನು ಮಹಾರಾಷ್ಟ್ರಕ್ಕೆ ಸೇರಿಸುತ್ತೇವೆಂದು. ಅದರ ಬಗ್ಗೆ ತೀವ್ರರಾಗಿ ಹೋರಾಟ ಮಾಡುತ್ತೇವೆಂದು ಹೇಳಿ ಅಲ್ಲಿ ಶಾಸನ ಸಭೆಯಲ್ಲಿ ನಿರ್ಣಯ ಮಾಡಿದ್ದಾರೆ.

ಅಧ್ಯಕ್ಷರು ; ತಾವು ಹಿರಿಯ ಸದಸ್ಯರು ಇದ್ದೀರಿ..... ಪ್ರಶ್ನೋತ್ತರ ....